# ಮಾಸ ಭವಿಷ್ಯ

ಅರುಣ ಪಿ. ಭಟ್



**ಮೇಷ:** ಶೈಕ್ಷಣಿಕ ಪ್ರಗತಿ. ವಿವಿಧ ಮೂಲಗಳಿಂದ ಹೆಚ್ಚುವರಿ ಆದಾಯ. ತಿಂಗಳ ಮಧ್ಯಭಾಗದಲ್ಲಿ ಈ ಹಿಂದೆ ತೆಗೆದುಕೊಂಡ ನಕಾರಾತ್ಮಕ ನಿರ್ಧಾರಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ ಆಲೋಚಿಸುವಿರಿ. ಖರ್ಚು–ವೆಚ್ಚಗಳು ಹೆಚ್ಚಬಹುದು. ತಿಂಗಳಾಂತ್ಯದಲ್ಲಿ ಸಂತೋಷದ ವಾತಾವರಣ. ಶುಭ: 12, 19, 26 ಅಶುಭ: 3, 11, 23

**ವೃಷಭ:** ವೈಯಕ್ತಿಕ ಶ್ರಮದಿಂದ ಯಶಸ್ಸು ಪಡೆಯುವಿರಿ. ಬಹುದಿನಗಳ ಆಕಾಂಕ್ಷೆ ಪೂರ್ಣಗೊಳ್ಳುವುದು. ಕುಟುಂಬದೊಡನೆ ಪ್ರವಾಸ, ಕ್ಷೇತ್ರದರ್ಶನ. ಅರ್ಧಕ್ಕೆ ನಿಂತ ಮನೆಕೆಲಸಕ್ಕೆ ಚಾಲನೆ ದೊರೆಯುವುದು. ವಾಹನ ಖರೀದಿಗೆ ಉತ್ತಮ ಸಮಯ. ಬರವಣಿಗೆಯಲ್ಲಿ ಯಶಸ್ಸು. ಶುಭ: 11, 18, 27 ಅಶುಭ: 10, 17, 29





**ಮಿಥುನ:** ವಿರೋಧಿಗಳಿಗೆ ತಕ್ಕ ಪ್ರತ್ಯುತ್ತರ ನೀಡುವಿರಿ. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುವಿರಿ. ಕುಟುಂಬದಲ್ಲಿ ಭಿನ್ನಾಭಿಪ್ರಾಯ ತಲೆದೋರುವ ಸಾಧ್ಯತೆ ಇದೆ. ಉದ್ಯೋಗ ಸ್ಥಳದಲ್ಲಿ ಅನುಕೂಲ. ಹಣಕಾಸು ಸ್ಥಿತಿ ಸುಧಾರಿಸಲಿದೆ. ಶುಭ: 9, 11, 21 ಅಶುಭ: 12, 22, 28

**ಕರ್ಕ:** ಸಂಗಾತಿ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಅವಿವಾಹಿತರಿಗೆ ಸೂಕ್ತ ಸಂಬಂಧ ದೊರೆಯುವುದು. ವಿರೋಧಿಗಳು ಸಮಸ್ಯೆ ಮಾಡುವ ಸಾಧ್ಯತೆ ಇದೆ. ದೂರ ಪ್ರಯಾಣ ಮುಂದಕ್ಕೆ ಹಾಕುವುದು ಒಳಿತು. ವೃತ್ತಿಪರ ವಿಚಾರಗಳಲ್ಲಿ ಅದೃಷ್ಟ ಕೈ ಹಿಡಿಯಲಿದೆ. ಶುಭ: 10, 18, 29 ಅಶುಭ: 13, 22, 27





**ಸಿಂಹ:** ಆರೋಗ್ಯ ಸುಧಾರಣೆಗೆ ಪ್ರಯತ್ನಿಸುವಿರಿ. ಹಲವು ಸಕಾರಾತ್ಮಕ ಬದಲಾವಣೆಗಳು ಉಂಟಾಗಲಿವೆ. ಬರವಣಿಗೆ, ಕಲೆ, ಸಾಹಿತ್ಯ, ಸೌಂದರ್ಯ, ಉತ್ಪಾದನೆ, ನಿರ್ಮಾಣ ಕ್ಷೇತ್ರಗಳಲ್ಲಿರುವವರಿಗೆ ಯಶಸ್ಸು. ತಿಂಗಳ ದ್ವಿತೀಯಾರ್ಧದಲ್ಲಿ ಅಗತ್ಯ ವಸ್ತುಗಳ ಖರೀದಿ. ಶುಭ: 10, 14, 26 ಅಶುಭ: 15, 18, 29

**ಕನ್ಯಾ:** ತಂದೆ, ತಾಯಿ, ಸೋದರ, ಸೋದರಿ ಹಾಗೂ ಹತ್ತಿರದ ಸಂಬಂಧಿಗಳೊಂದಿಗೆ ಬಾಂಧವ್ಯ ವೃದ್ಧಿಸುವುದು. ಕುಟುಂಬದಲ್ಲಿ ಸಂತಸದ ವಾತಾವರಣ ಇರಲಿದೆ. ಆರೋಗ್ಯದ ಬಗ್ಗೆ ಎಚ್ಚರಿಕೆಯಿಂದಿರಿ. ತಿಂಗಳ ಮಧ್ಯಭಾಗದಲ್ಲಿ ಅದೃಷ್ಟದ ಬೆಂಬಲ, ವ್ಯವಹಾರಗಳಲ್ಲಿ ಲಾಭ. ಶುಭ: 9, 18, 29 ಅಶುಭ: 12, 16, 27





**ತುಲಾ:** ಮಾರಾಟ, ಉತ್ಪಾದನೆ, ಸಂಶೋಧನೆ, ಅಭಿವೃದ್ಧಿ ಕ್ಷೇತ್ರದಲ್ಲಿರುವವರು ಗುರಿ ಸಾಧಿಸುವರು. ವ್ಯಾಪಾರ–ಉದ್ಯಮದಲ್ಲಿ ಯಶಸ್ಸು. ಆರೋಗ್ಯ ಉತ್ತಮವಾಗಿರುತ್ತದೆ. ತಿಂಗಳ ಕೊನೆಯಲ್ಲಿ ಅದೃಷ್ಟ ನಿಮ್ಮದಾಗಲಿದೆ. ಇದರಿಂದ ಮಾನಸಿಕ ನೆಮ್ಮದಿ ದೊರೆಯಲಿದೆ. ಶುಭ: 11, 19, 28 ಅಶುಭ: 9, 13, 27

**ವೃಶ್ಚಿಕ:** ಆಸ್ತಿ ಖರೀದಿಗೆ ಮುಂದಾಗುವ ಮುನ್ನ ಕಾಗದಪತ್ರಗಳನ್ನು ಪರಿಶೀಲನೆ ಮಾಡಿ. ವೈಯಕ್ತಿಕ ಸಂಬಂಧಗಳಲ್ಲಿ ಕಹಿ ಬೆಳವಣಿಗೆಗಳು ಕಂಡುಬರಬಹುದು. ಕುಟುಂಬದವರ ಬೆಂಬಲ ದೊರೆಯಲಿದೆ. ಆರೋಗ್ಯದ ಬಗ್ಗೆ ಎಚ್ಚರವಿರಲಿ. ಉನ್ನತ ಶಿಕ್ಷಣದಲ್ಲಿ ಪ್ರಗತಿ. ಶುಭ: 10, 19, 28 ಅಶುಭ: 8, 16, 22





**ಧನು:** ವ್ಯಾಪಾರ ಉದ್ಯಮದಲ್ಲಿ ಪ್ರಗತಿ. ಪ್ರತಿಷ್ಠಿತ ಸಂಸ್ಥೆಯೊಂದರ ಜತೆಗೆ ಮಹತ್ವದ ಒಪ್ಪಂದಕ್ಕೆ ಸಹಿ ಹಾಕುವ ಸಾಧ್ಯತೆ. ವೈವಾಹಿಕ ಜೀವನದಲ್ಲಿ ಸಂತೋಷ. ಉದ್ಯೋಗ ನಿಮಿತ್ತ ಪ್ರಯಾಣ ಸಾಧ್ಯತೆ. ತಿಂಗಳ ಕೊನೆಯಲ್ಲಿ ಆರೋಗ್ಯ ಕೈಕೊಡುವ ಅಪಾಯವಿದೆ. ವಿಶ್ರಾಂತಿ ತೆಗೆದುಕೊಳ್ಳಿ. ಶುಭ: 6, 16, 27 ಅಶುಭ: 8, 15, 28

**ಮಕರ:** ಹಣದ ಸದುಪಯೋಗ ಮಾಡಿಕೊಳ್ಳಿ. ಮಾರಾಟ ಕ್ಷೇತ್ರದಲ್ಲಿರುವವರಿಗೆ ಲಾಭ. ಅಹಂಕಾರವನ್ನು ಬದಿಗಿಟ್ಟು ಸಂಗಾತಿ ಜತೆಗೆ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಿ. ತಿಂಗಳ ಅಂತ್ಯಕ್ಕೆ ಆರೋಗ್ಯ ಸುಧಾರಿಸುತ್ತದೆ. ಭೂಮಿ ಖರೀದಿಗೆ ಅವಕಾಶಗಳಿವೆ. ಶುಭ: 10, 16, 26 ಅಶುಭ: 11, 15, 28





**ಕುಂಭ:** ಉನ್ನತ ಶಿಕ್ಷಣದಲ್ಲಿ ಯಶಸ್ಸು. ತಿಂಗಳ ಮಧ್ಯಭಾಗದಲ್ಲಿ ವೃತ್ತಿಪರ ಜೀವನದಲ್ಲಿ ಅತ್ಯುತ್ತಮವಾದ ಬೆಳವಣಿಗೆ ಕಾಣಲಿದೆ. ಆರೋಗ್ಯದಲ್ಲಿ ಚೇತರಿಕೆ. ಆದಾಯದಲ್ಲಿ ಅನುಕೂಲ. ಹಣಕಾಸಿನ ಸಮಸ್ಯೆಗಳಿಗೆ ಪರಿಹಾರ ಮಾರ್ಗಗಳು ಗೋಚರಿಸುತ್ತವೆ. ಶುಭ: 5, 10, 28 ಅಶುಭ: 7, 13, 26

**ಮೀನ:** ಈ ಹಿಂದೆ ಪೂರ್ಣಗೊಳಿಸಲಾಗದ ಕೆಲಸಕಾರ್ಯಗಳನ್ನು ಪೂರ್ಣಗೊಳಿಸುವಿರಿ. ನಿಮ್ಮ ಜವಾಬ್ದಾರಿಗಳನ್ನು ಪೂರೈಸಲು ಹೆಚ್ಚು ಸಮಯವನ್ನು ಮೀಸಲಿಡುವಿರಿ. ತಿಂಗಳ ಮೊದಲ ಭಾಗದಲ್ಲಿ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳಬಹುದು. ಶುಭ: 11, 16, 25 ಅಶುಭ: 14, 18, 28

